ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:05.01.2021 ರಂದು ಅಪರಾಹ್ನ 3.00 ಗಂಟೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಸಭಾ ಕೊಠಡಿಯಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಆಸ್ತಿಗಳನ್ನು ಡಿಜಿಟಲೀಕರಣಗೊಳಿಸುವ ಯೋಜನೆಯ ಅನುಷ್ಠಾನದ ಪ್ರಗತಿ ಪರಿಶೀಲನೆ ಬಗ್ಗೆ ಜರುಗಿದ ಸಭೆಯ ನಡವಳಿಗಳು.

<u>ಸಭೆಗೆ ಹಾಜರಾದ ಅಧಿಕಾರಿ/ಸಿಬ್ಬಂದಿಗಳು (ಶ್ರೀ/ಶ್ರೀಮತಿ):</u>

1. ಎಲ್.ಕೆ. ಅತೀಕ್, ಭಾ.ಆ.ಸೇ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
2. ಪ್ರಿಯಾಂಕ ಮೇರಿ ಫ್ರಾನ್ಸಿಸ್, ಭಾ.ಆ.ಸೇ, ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
3. ಶಿಲ್ಪಾ ನಾಗ್, ಭಾ.ಆ.ಸೇ, ನಿರ್ದೇಶಕರು, ಇ-ಆಡಳಿತ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
4. ಕೆ.ಯಾಲಕ್ಕಿಗೌಡ, ನಿರ್ದೇಶಕರು (ಅಭಿವೃದ್ಧಿ), ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
5. ಶೆ.ಬಿ.ಅಂಜನಪ್ಪ, ನಿರ್ದೇಶಕರು, (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
6. ಶಿವರಾಮೇಗೌಡ.ಕೆ, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಬೆಂಗಳೂರು ನಗರ ಜಿಲ್ಲಾ ಪಂಚಾಯತ್, ಬೆಂಗಳೂರು.
7. ಡಾ. ಸಿ.ಸಿದ್ಧರಾಮಯ್ಯ, ಉಪ ಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತ್, ಬೆಂಗಳೂರು.
8. ಜಗದೀಶ್.ಕೆ.ಜಿ, ಉಪ ನಿರ್ದೇಶಕರು, ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
9. ಸಮರ್ಥರಾಮ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
10. ರಾಜಶೇಖರ್,ಎ.ಎಸ್. ವೈಜ್ಞಾನಿಕ ಅಧಿಕಾರಿ, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (KSRSAC), ಬೆಂಗಳೂರು.
11. ಸುರೇಶ್ ಬಿ.ವಿ, ವೈಜ್ಞಾನಿಕ ಅಧಿಕಾರಿ, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (KSRSAC), ಬೆಂಗಳೂರು.
12. ಮಹಮ್ಮದ್ ಇಮ್ತಿಯಾಜ್, ರಾಜ್ಯ ಯೋಜನಾ ವ್ಯವಸ್ಥಾಪಕರು,ಇ-ಆಡಳಿತ, ಗ್ರಾಅಪ ಇಲಾಖೆ, ಬೆಂಗಳೂರು.
13. ಅಮೃತವರ್ಷಿಣಿ, ತಾಂತ್ರಿಕ ಸಮಾಲೋಚಕರು, ಇ-ಆಡಳಿತ, ಗ್ರಾಅಪ ಇಲಾಖೆ, ಬೆಂಗಳೂರು.

ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ನಿರ್ದೇಶಕರು (ಇ-ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರು ಸ್ವಾಗತಿಸಿದರು ಹಾಗೂ ಸಭೆಯ ಕಾರ್ಯಸೂಚಿಗಳ ಬಗ್ಗೆ ವಿವರಿಸಿದರು.

1. ಗ್ರಾಮ ಪಂಚಾಯತಿಯ ಎಲ್ಲಾ ಆಸ್ತಿಗಳ ಡಿಜಿಟಲೀಕರಣಗೊಳಿಸಿ ತೆರಿಗೆ ವ್ಯಾಪ್ತಿಯಿಂದ ಹೊರಗೆ ಉಳಿದ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತರುವ ಪ್ರಕ್ರಿಯೆಯನ್ನು ಏಕಕಾಲಕ್ಕೆ 32 ಗ್ರಾಮ ಪಂಚಾಯತಿಗಳಲ್ಲಿ ಪ್ರಾರಂಭಿಸಿ, ಒಂದು ತಿಂಗಳ ಕಾಲಾವಧಿಯೊಳಗೆ ಮುಕ್ತಾಯಗೊಳಿಸುವುದು. ಅದರಂತೆ, ಇನ್ನುಳಿದ 64 ಗ್ರಾಮ ಪಂಚಾಯತಿಗಳಲ್ಲಿ ಮುಕ್ತಾಯಗೊಳಿಸಿ, 03 ತಿಂಗಳ ಕಾಲಾವಧಿಯಲ್ಲಿ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಿ, 03 ತಿಂಗಳ ಕಾಲಾವಧಿಯಲ್ಲಿ ಬೆಂಗಳೂರು ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಯೋಜನೆಯನ್ನು 03 ಹಂತದಲ್ಲಿ ಅನುಷ್ಠಾನ ಮಾಡಲು ಅಗತ್ಯವಿರುವ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ರೂ.1,74,50,000/- ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ ಎಂದು ಆಯುಕ್ತರು, ಪಂಚಾಯತ್ ರಾಜ್ ಸಭೆಗೆ ತಿಳಿಸಿದರು.
2. ಸದರಿ ಯೋಜನೆಯ ಅನುಷ್ಠಾನಕ್ಕೆ ಬಿಡುಗಡೆ ಮಾಡಿದ ಅನುದಾನವನ್ನು 34 ಗ್ರಾಮ ಪಂಚಾಯತಿಗಳ ಆಸ್ತಿಗಳ ಡಿಜಿಟಲೀಕರಣಗೊಳಿಸಲು 260 ನೌಕರರ ಸೇವೆಯನ್ನು ಕಿಯೋನಿಕ್ಸ್ ಸಂಸ್ಥೆಯಿಂದ ಪಡೆದು, ಡಿಜಿಟಲೀಕರಣ ನಕ್ಷೆಗಳಲ್ಲಿ ಆಸ್ತಿಗಳ ಪಾಲಿಗಾನ್ ಅನ್ನು ರಚಿಸಲು ವಿನಿಯೋಗಿಸಿಕೊಳ್ಳಲಾಗಿದ್ದು, KSRSAC ಸಂಸ್ಥೆ ರವರು ನೀಡಿದ ನಕ್ಷೆಗಳಲ್ಲಿ ಆಸ್ತಿವಾರು ಸಮೀಕ್ಷೆ ನಡೆಸಿ ಪಾಲಿಗಾನ್ ಅನ್ನು ರಚಿಸಿ ಡಿಜಿಟಲೀಕರಣಗೊಳಿಸಲು KSRSAC ಸಂಸ್ಥೆಗೆ ಹಿಂತಿರುಗಿಸಲಾಗಿದೆ ಎಂದು ಉಪ ಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ರವರು ಸಭೆಗೆ ತಿಳಿಸಿದರು.
3. 34 ಗ್ರಾಮ ಪಂಚಾಯತಿಗಳ ಆಸ್ತಿಗಳ ಪಾಲಿಗಾನ್ ಅನ್ನು ರಚಿಸಿದ ನಂತರ, ಸದರಿ ನಕ್ಷೆಗಳನ್ನು KSRSAC ಸಂಸ್ಥೆ ರವರು ಡಿಜಿಟಲೀಕರಣಗೊಳಿಸಿ ಇ-ಸ್ವತ್ತು ಎನ್.ಐ.ಸಿ ತಂಡಕ್ಕೆ ವೆಬ್ ಸರ್ವೀಸ್ ಮುಖಾಂತರ ನೀಡಲಾಗಿದೆ ಎಂದು KSRSAC ಸಂಸ್ಥೆಯ ಪ್ರತಿನಿಧಿಗಳು ಸಭೆಗೆ ತಿಳಿಸಿದರು.
4. KSRSAC ಸಂಸ್ಥೆಯವರು ವೆಬ್ ಸರ್ವೀಸ್ ಮುಖಾಂತರ ನೀಡಲಾದ ಮಾಹಿತಿಯನ್ನು ಇ-ಸ್ವತ್ತು ತಂತ್ರಾಂಶದಲ್ಲಿ ಅಳವಡಿಸಲಾಗಿದ್ದು, ಮೊದಲನೇ ಹಂತದ ಸಮೀಕ್ಷೆಯನ್ನು ಮುಕ್ತಾಯಗೊಳಿಸಿದ 34 ಗ್ರಾಮ

ಪಂಚಾಯತಿಯವರು ಇ-ಸ್ವತ್ತು ತಂತ್ರಾಂಶದಲ್ಲಿ ಆಸ್ತಿಗಳನ್ನು ಇ-ಸ್ವತ್ತು ಆಸ್ತಿಗಳು, ಪಂಚತಂತ್ರ ಆಸ್ತಿಗಳು ಮತ್ತು ಹೊಸ ಆಸ್ತಿಗಳೆಂದು ವರ್ಗೀಕರಣಗೊಳಿಸುವ ಅವಶ್ಯಕತೆಯಿರುತ್ತದೆ ಎಂದು ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು ರವರು ಸಭೆಗೆ ತಿಳಿಸಿದರು.

5. ಮಾನ್ಯ ಪ್ರಧಾನ ಕಾರ್ಯದರ್ಶಿರವರು ಮೊದಲನೇ ಹಂತದ ಸಮೀಕ್ಷೆಯನ್ನು ಮುಕ್ತಾಯಗೊಳಿಸಿದ 34 ಗ್ರಾಮ ಪಂಚಾಯತಿಯವರು ಇ-ಸ್ವತ್ತು ತಂತ್ರಾಂಶದಲ್ಲಿ ಆಸ್ತಿಗಳ ವರ್ಗೀಕರಣ ಮಾಡುವ ಪ್ರಕ್ರಿಯೆಯನ್ನು ಕೂಡಲೇ ಶುರು ಮಾಡಿ ದಿನಾಂಕ:20.01.2021ರೊಳಗೆ ಮುಕ್ತಾಯಗೊಳಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ರವರಿಗೆ ಸೂಚಿಸಿದರು.
6. ಪ್ರಸ್ತುತ ಆಸ್ತಿಗಳ ಪಾಲಿಗಾನ್ ಅನ್ನು ಡಿಜಿಟಲೀಕರಣಗೊಳಿಸಿದ ನಂತರ ಇ-ಸ್ವತ್ತು ಎನ್.ಐ.ಸಿ ತಂಡದವರು ಅಭಿವೃದ್ಧಿಪಡಿಸಲಾದ ಮೊಬೈಲ್ ಆಪ್ ಮುಖಾಂತರ ಮತ್ತೊಮ್ಮೆ ಆಸ್ತಿವಾರು ಸಮೀಕ್ಷೆ ನಡೆಸಿ ಆಸ್ತಿಗಳ ವಿವರಗಳನ್ನು ಸೆರೆಹಿಡಿಯಬೇಕಾಗಿರುತ್ತದೆ. ಅದರಂತೆ ಈಗಾಗಲೇ ಮೊಬೈಲ್ ಆಪ್ ಅನ್ನು ಅಭಿವೃದ್ಧಿಪಡಿಸಲಾಗಿದ್ದು, ಇ-ಆಡಳಿತ ಶಾಖೆಗೆ ಟೆಸ್ಟಿಂಗ್ ಮಾಡಲು ವಿವರಗಳನ್ನು ನೀಡಲಾಗಿದೆ ಎಂದು ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ ರವರು ಸಭೆಗೆ ತಿಳಿಸಿದರು.
7. ಮಾನ್ಯ ಪ್ರಧಾನ ಕಾರ್ಯದರ್ಶಿರವರು ಮೊಬೈಲ್ ಆಪ್ ನ ಟೆಸ್ಟಿಂಗ್ ಅನ್ನು ದಿನಾಂಕ:06.01.2021 ರೊಳಗೆ ಮುಕ್ತಾಯಗೊಳಿಸಿ ಎನ್.ಐ.ಸಿ ತಂಡದವರಿಗೆ ಪ್ರತಿಕ್ರಿಯೆಯನ್ನು ನೀಡುವಂತೆ ಇ-ಆಡಳಿತ ತಂಡಕ್ಕೆ ಸೂಚಿಸಿದರು.
8. ಉಪ ಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ರವರು ಇನ್ನುಳಿದ 55 ಗ್ರಾಮ ಪಂಚಾಯತಿಗಳಲ್ಲಿ ಮೊದಲನೇ ಹಂತದಲ್ಲಿ ಆಸ್ತಿವಾರು ಸಮೀಕ್ಷೆ ನಡೆಸಿ ನಕ್ಷೆಗಳಲ್ಲಿ ಪಾಲಿಗಾನ್ ಅನ್ನು ರಚಿಸುವ ಪ್ರಕ್ರಿಯೆಗೆ ಕಿಯೋನಿಕ್ಸ್ ಸಂಸ್ಥೆಯ ಮುಖಾಂತರ ನೌಕರರ ಸೇವೆಯನ್ನು ಪಡೆಯಲು ಸರ್ಕಾರದಿಂದ ಅಂದಾಜು ರೂ.2.5 ಕೋಟಿ ಅನುದಾನವನ್ನು ಬಿಡುಗಡೆ ಮಾಡಲು ಪ್ರಧಾನ ಕಾರ್ಯದರ್ಶಿಯವರಲ್ಲಿ ಕೋರಿದರು.
9. ಪ್ರಧಾನ ಕಾರ್ಯದರ್ಶಿಯವರು ಮುಂದಿನ ದಿನಗಳಲ್ಲಿ ಇದರ ಬಗ್ಗೆ ಚರ್ಚಿಸಿ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವುದರ ಬಗ್ಗೆ ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿದರು.
10. ಇನ್ನುಳಿದ 55 ಗ್ರಾಮ ಪಂಚಾಯತಿಗಳಲ್ಲಿ ಮೊದಲನೇ ಹಂತದಲ್ಲಿ ಆಸ್ತಿವಾರು ಸಮೀಕ್ಷೆ ನಡೆಸಿ ನಕ್ಷೆಗಳಲ್ಲಿ ಪಾಲಿಗಾನ್ ಅನ್ನು ರಚಿಸುವ ಪ್ರಕ್ರಿಯೆಯನ್ನು ದಿ:20.01.2021 ರಿಂದ ಪ್ರಾರಂಭಿಸಲು ಪ್ರಧಾನ ಕಾರ್ಯದರ್ಶಿಯವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ರವರಿಗೆ ಸೂಚಿಸಿದರು.
11. ಪ್ರಧಾನ ಕಾರ್ಯದರ್ಶಿಯವರು ಮೊದಲನೇ ಹಂತದಲ್ಲಿ ಆಸ್ತಿವಾರು ಸಮೀಕ್ಷೆ ನಡೆಸಿ ನಕ್ಷೆಗಳಲ್ಲಿ ಆಸ್ತಿಗಳ ಪಾಲಿಗಾನ್ ಅನ್ನು ರಚಿಸುವ ಪ್ರಕ್ರಿಯೆ ಮುಕ್ತಾಯಗೊಳಿಸಿದ ನಂತರ ಎರಡನೇ ಹಂತದಲ್ಲಿ ಆಸ್ತಿವಾರು ಮಾಹಿತಿಯನ್ನು ಕಲೆ ಹಾಕಲು ಸಮೀಕ್ಷೆ ನಡೆಸುವ ಪ್ರಕ್ರಿಯೆಗೆ ಅಗತ್ಯವಿರುವ ಮಾನವ ಸಂಪನ್ಮೂಲ ಪಡೆಯಲು ಬೇಕಾದ ಅನುದಾನವನ್ನು ಗ್ರಾಮ ಪಂಚಾಯತಿಯ ಸ್ವಂತ ನಿಧಿಯಿಂದ ಭರಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ರವರಿಗೆ ಸೂಚಿಸಿದರು.
12. ಎರಡನೇ ಹಂತದಲ್ಲಿ ಆಸ್ತಿವಾರು ಮಾಹಿತಿಯನ್ನು ಕಲೆಹಾಕಲು ಸಮೀಕ್ಷೆ ನಡೆಸುವ ಪ್ರಕ್ರಿಯೆಯನ್ನು ಶುರು ಮಾಡಲು ಮೊಬೈಲ್ ಆಪ್ ಬಳಕೆಯ ಬಗ್ಗೆ ಮತ್ತು ಇ-ಸ್ವತ್ತು ತಂತ್ರಾಂಶದ ತರಬೇತಿ ನೀಡುವ ಅವಶ್ಯಕತೆ ಇದೆ ಎಂದು ಉಪಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ರವರು ತಿಳಿಸಿದರು. ಅದರಂತೆ, ದಿನಾಂಕ:11.01.2021 ಮತ್ತು 13.01.2021 ರಂದು ತರಬೇತಿಯನ್ನು ನೀಡಲು ಇ-ಆಡಳಿತ ತಂಡಕ್ಕೆ ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಸೂಚಿಸಿದರು.
13. ಕಿಯೋನಿಕ್ಸ್ ಸಂಸ್ಥೆಯಿಂದ ಮಾನವ ಸಂಪನ್ಮೂಲ ಪಡೆಯುವ ವೇಳೆ ನೌಕರರಿಗೆ ನಿರ್ದಿಷ್ಟವಾದ ವೇಳಾ ಪಟ್ಟಿಯನ್ನು ಹಾಗೂ ಪ್ರತಿ ದಿನದಲ್ಲಿ ಎಷ್ಟು ಆಸ್ತಿಗಳನ್ನು ಸಮೀಕ್ಷೆ ಮಾಡಬೇಕಾಗಿದೆ ಎನ್ನುವ ಗುರಿಯನ್ನು ನಿಗದಿಪಡಿಸಿ, ಅದರಂತೆ ಸದರಿಯವರಿಂದ ಸೇವೆಯನ್ನು ಪಡೆದುಕೊಳ್ಳಲು ಪ್ರಧಾನ ಕಾರ್ಯದರ್ಶಿಯವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ರವರಿಗೆ ಸೂಚಿಸಿದರು.

<u>ನಿರ್ಣಯಗಳು:</u>

1. ಮೊದಲನೇ ಹಂತದ ಸಮೀಕ್ಷೆಯನ್ನು ಮುಕ್ತಾಯಗೊಳಿಸಿದ 34 ಗ್ರಾಮ ಪಂಚಾಯತಿಯವರು ಇ-ಸ್ವತ್ತು ತಂತ್ರಾಂಶದಲ್ಲಿ ಆಸ್ತಿಗಳ ವರ್ಗೀಕರಣ ಮಾಡುವ ಪ್ರಕ್ರಿಯೆಯನ್ನು ದಿನಾಂಕ:20.01.2021 ರೊಳಗೆ ಮುಕ್ತಾಯಗೊಳಿಸುವುದು.